ಮೈಸೂರು ಮೃಗಾಲಯ

೫೦೨. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಪಶುಸಂಗೋಪನಾ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಮೃಗಾಲಯದಲ್ಲಿ ಈಗಿರುವ ಪ್ರಾಣಿಗಳ ಸಂಖ್ಯೆ ಎಷ್ಟು ?

ಆ) ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಿದ್ದು ಇವುಗಳನ್ನು ಹೆಚ್ಚು ಮಾಡುವುದರ ಬಗ್ಗೆ ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು.

ಇ) ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಆಹಾರಕ್ಕಾಗಿ ಪ್ರತಿ ತಿಂಗಳು ಖರ್ಚಾಗುತ್ತಿರುವ ಹಣವೆಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನಾ ಮತ್ತು ಅರಣ್ಯ ಮಂತ್ರಿಗಳು).—

ಅ) ಮೈಸೂರು ಮೃಗಾಲಯದಲ್ಲಿ ಎಲ್ಲಾ ಜಾತಿಯ ಒಟ್ಟು ೮೬೦ ಪ್ರಾಣಿಗಳಿರುತ್ತವೆ.

ಆ) ಕರ್ನಾಟಕ ಮೃಗಾಲಯ ಪ್ರಾಧಿಕಾರವು ಮೈಸೂರು ಮೃಗಾಲಯದಲ್ಲಿನ ಪ್ರಾಣಿಗಳ ಸಂಖ್ಯೆಯನ್ನು ಹೆಚ್ಚಿಸುವ ದಿಶೆಯಿಂದ ದೇಶ ವಿದೇಶಗಳ ಮೃಗಾಲಯಗಳೊಂದಿಗೆ ಪ್ರಾಣಿಗಳನ್ನು ಆಮದು ಮಾಡಿಕೊಳ್ಳುವ ದಿಶೆಯಲ್ಲಿ ಪತ್ರ ವ್ಯವಹಾರಗಳನ್ನು ಮಾಡಲಾಗಿದ್ದು. ನಾವು ದೇಶಗಳಿಂದ ಹಲವಾರು ಪ್ರಾಣಿಗಳನ್ನು ಆಮದು ಮಾಡಿಕೊಳ್ಳಲಾಗಿದ ಮತ್ತು ಕ್ಷೀಣಿಸುತ್ತಿರುವ ಪ್ರಾಣಿಗಳ ಸಂಖ್ಯೆಯನ್ನು ಹೆಚ್ಚಿಸಲು ಜೊತೆಗಾರ್ತಿ ಪ್ರಾಣಿಗಳನ್ನು ತರಿಸಿಕೊಂಡಿದ್ದರಿಂದ, ಪ್ರಾಣಿಗಳ ಸಂಖ್ಯೆ ಹೆಚ್ಚಿಸಲು ಎಲ್ಲಾ ಆಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಇ) ಮೃಗಾಲಯದಲ್ಲಿನ ಪ್ರಾಣಿಗಳ ಆಹಾರಕ್ಕಾಗಿ ಪ್ರತಿ ತಿಂಗಳು ಸುಮಾರು ೧,೮೫,೭೦೦-೦೦ ರೂ. ಗಳ ವೆಚ್ಚ ಮಾಡಲಾಗುತ್ತಿದೆ.

ಮೈಸೂರು ಮೃಗಾಲಯದ ವೀಕ್ಷಕರ ಸಂಖ್ಯೆ

೫೦೬. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಮೃಗಾಲಯ ವೀಕ್ಷಿಸಲು ೧೯೮೯-೯೦ನೇ ಸಾಲಿನಲ್ಲಿ ಬಂದ ಪ್ರವಾಸಿಗಳ ಸಂಖ್ಯೆ ಹಾಗೂ ಅವರಿಂದ ವಸೂಲಾದ ಶುಲ್ಕ ಎಷ್ಟು.

ಆ) ಮೈಸೂರು ಮೃಗಾಲಯದಲ್ಲಿರುವ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ಹಾಗೂ ಇವರಿಗಾಗಿ ೧೯೮೯-೯೦ರಲ್ಲಿ ಸಂಬಳ ಮತ್ತಿತರ ಭತ್ಯಗಳಿಗಾಗಿ ಖರ್ಚಾದ ಹಣವೆಷ್ಟು ?

ಇ) ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಕೊಠಡಿಗಾಗಿ ಹಾಗೂ ಇನ್ನಿತರ ಕಾಮಗಾರಿಗೆಂದು ೧೯೮೯-೯೦ರಲ್ಲಿ ಖರ್ಚಾದ ಹಣ ಎಷ್ಟು.

ಈ) ಇದೇ ಉದ್ದೇಶಕ್ಕಾಗಿ ೧೯೯೦-೯೧ರಲ್ಲಿ ಖರ್ಚು ಮಾಡಲಿರುವ ಹಣದ ಪೊತ್ತ ಎಷ್ಟು.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಮೈಸೂರು ಮೃಗಾಲಯವನ್ನು ವೀಕ್ಷಿಸಲು ೧೯೮೯-೯೦ನೇ ಸಾಲಿನಲ್ಲಿ ಬಂದ ಪ್ರವಾಸಿಗರ ಸಂಖ್ಯೆ ಒಟ್ಟು ೧೯,೮೫,೮೦೦ ಮಂದಿ ಮತ್ತು ರೂ. ೩೬,೪೫,೩೬೦-೫೦ ಶುಲ್ಕ ವಸೂಲಾತಿ ಮಾಡಲಾಗಿದೆ.

ಆ) ಇತರೆ ಇಲಾಖೆಗಳಿಂದ ಪ್ರತಿ ನಿಯೋಜನೆಯ ಮೇಲೆ ಬಂದ ಅಧಿಕಾರಿಗಳ ಮತ್ತು ನೌಕರರು ಮೃಗಾಲಯ ಪ್ರಾಧಿಕಾರದಿಂದ ನೇಮಕಗೊಂಡ ನೌಕರರು ಹಾಗೂ ದಿನಗೂಲಿ ಮೇಲೆ ನೇಮಿಸಲ್ಪಟ್ಟಿರುವ ಅಭ್ಯರ್ಥಿಗಳು ಸೇರಿದಂತೆ ಮೈಸೂರು ಮೃಗಾಲಯದಲ್ಲಿ ಒಟ್ಟು ೮೨ ಮಂದಿ ಇರುತ್ತಾರೆ ಸಂಬಳ, ದಿನಗೂಲಿ, ಭವಿಷ್ಯನಿಧಿ, ಪ್ರವಾಸಿ ಭತ್ಯ ಇತ್ಯಾದಿ ಸೇರಿ ೧೯೮೯-೯೦ರ ಸಾಲಿನಲ್ಲಿ ಒಟ್ಟು ೩೨,೪೬,೪೫೪-೧೫ ರೂಪಾಯಿಗಳು ವೆಚ್ಚವಾಗಿದೆ.

ಇ) ೧೯೮೯-೯೦ನೇ ಸಾಲಿನಲ್ಲಿ ಪ್ರಾಣಿಗಳ ಕೊಠಡಿಗಾಗಿ ಹಾಗೂ ಇನ್ನಿತರ ಕಾಮಗಾರಿಗಾಗಿ ಒಟ್ಟು ೫೮,೨೨,೦೯೦-೮೨ ರೂಪಾಯಿಗಳು ಖರ್ಚಾಗಿವೆ.